ಓ.ಎಸ್.309/2022 ಪಿ.ಡಬ್ಲು-2
ಈರಣ್ಣ ತಂದೆ ತಿಮ್ಮಾರೆಡ್ಡಿ
ದಿ.24-09-2024.ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಎಮ್.ಸಿ.ಪಿ ವಕೀಲರಿಂದ** :-

ನನ್ನ ಲಿಖಿತ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ವಿಷಯದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಪ್ರಮಾಣ ಪತ್ರವನ್ನು ನಮ್ಮ ಮಾವ ಅಮರೇಶ ತಂದೆ ಯಂಕಪ್ಪರವರ ಹತ್ತಿರ ಬರೆಸಿರುತ್ತೇನೆ. ದಾವೆ ಹಾಕಲು ಮಾಹಿತಿಯನ್ನು ನಾವೇ ಕೊಟ್ಟಿರುತ್ತೇವೆ. ಈ ದಾವೆಯನ್ನು ನಮ್ಮ ಹೊಲಕ್ಕೆ ಹೋಗುವ ದಾರಿಯ ಸಲುವಾಗಿ ಮಾತ್ರ ಈ ದಾವೆ ಹಾಕಿರುತ್ತೇನೆ. ಸರ್ವೆ ನಂ.2, 36, 37, 38 ಆಸ್ತಿಗಳ ಸಂಬಂಧ ದಾವೆ ಹಾಕಿರುತ್ತೇವೆ. ಸದರಿ ಸರ್ವೆ ನಂ.37 ಚಂದ್ರಣ್ಣ ದಣಿ ರವರ ಹೆಸರಿನಲ್ಲಿರುತ್ತದೆ. ಸರ್ವೆ ನಂ.38 ನಮ್ಮ ಮಾವ ಭೀಮರಾಯ ರವರ ಹೆಸರಿನಲ್ಲಿರುತ್ತದೆ. ಸರ್ವೆ ನಂ.36 ನಮ್ಮ ತಾಯಿ ಯಮನಮ್ಮ ರವರ ಹೆಸರಿನಲ್ಲಿರುತ್ತದೆ. ಸರ್ವೆ ನಂ.36, 37 ಮತ್ತು 38 ರ ಮಾಲೀಕರನ್ನು ಪ್ರತಿವಾದಿಗಳನ್ನಾಗಿ ಮಾಡಿರುವುದಿಲ್ಲ ಪ್ರತಿವಾದಿ ಶಹಾಪುರಕ್ಕೆ ಹೋಗಿ ಸುಮಾರು 50 ವರ್ಷವಾಗಿರುತ್ತದೆ. ಪ್ರತಿವಾದಿಗೆ ಜಮೀನನ್ನು ನಮ್ಮ ಊರಿನ ದಣಿಯವರು ದಾನವಾಗಿ ಕೊಟ್ಟಿರುತ್ತಾರೆ. ಎಷ್ಟು ವರ್ಷದ ಹಿಂದೆ ದಾನ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯ ಹೊಲಕ್ಕೆ ಹೊಂದಿಕೊಂಡು ನಮ್ಮ ಊರಿಂದ ಈಚನಾಳಿಗೆ ಹೋಗಲು ಡಾಂಬರ್ ಮುಖ್ಯ ರಸ್ತೆ ಇದೆ ಎಂದರೆ ಸರಿ. 2012 ರಲ್ಲಿ ಓ.ಎಸ್.ನಂ.14/2012 ನ್ನು ಪ್ರತಿವಾದಿಯು ಪಿ.ಡಿ.ಓ ಈಚನಾಳರವರ ವಿರುದ್ದ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿದೆ. ಸದರಿ ದಾವೆಯಲ್ಲಿ ಪ್ರತಿವಾದಿಯು ಡಿಕ್ರಿ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸ್ಮಶಾನಕ್ಕೆ ಹೋಗುವ ದಾರಿ ಪ್ರತಿವಾದಿಯ ಜಮೀನಿನ ಉತ್ತರ ದಿಕ್ಕಿಗೆ ಬರುತ್ತದೆ. ಅಲ್ಲಿ ರಸ್ತೆ ಕೆಲಸ ನಡೆದಿತ್ತು ಅದನ್ನು ಪ್ರತಿವಾದಿಯು ಕೋರ್ಟ್ ಆದೇಶದ ಪ್ರಕಾರ ತಡೆಗೊಳಿಸಿರುತ್ತಾರೆ ಎಂದರೆ ಸರಿ. ದಾರಿಯ ಸಲುವಾಗಿ ಪ್ರತಿವಾದಿಗೆ ನಾವು ಬೇಟಿಯಾಗಿಲ್ಲ ಎಂದರೆ ಸರಿಯಲ್ಲ. ನಾವು 5-6 ವರ್ಷಗಳ ಹಿಂದೆ ಬೇಟಿಯಾಗಿರುತ್ತೇವೆ. ಪ್ರತಿವಾದಿಯ ತನ್ನ ಆಸ್ತಿಯಲ್ಲಿ ಕಬ್ಜೆ ಇದ್ದು ಅಲ್ಲಿ ಯಾವುದೇ ಸಾರ್ವಜನಿಕ ರಸ್ತೆ ಇಲ್ಲದಿದ್ದರೂ ಸಹ ಅವರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.